ರಾಜ್ಯ ಉಚ್ಚ ನ್ಯಾಯಾಲಯದ ದಿನಾಂಕ 7-11-1993ರ ಆದೇಶದಲ್ಲಿ ತಡೆಆಜ್ಞೆಯನ್ನು ತೆರವು ಮಾಡಿದ್ದು ಈ ಬಗ್ಗೆ ಸಲ್ಲಿಸಿರುವ ರಿಟ್ ಅಪೀಲುಗಳನ್ನು ವಜಾ ಮಾಡಿರುತ್ತಾರೆ. ಅರ್ಜಿದಾರರು ಈ ಬಗ್ಗೆ ಸುಪ್ರೀಂಕೋರ್ಟಿನಲ್ಲಿ ಎಸ್.ಎಲ್.ಪಿ. ಸಂಖ್ಯೆ : 18061:93 ಮತ್ತು 18062 :93ಅನ್ನು ದಾಖಲಿಸಿದ್ದು, ಸುಪ್ರೀಂಕೋರ್ಟ್ ದಿನಾಂಕ 19-11-1993ರ ಆದೇಶದಲ್ಲಿ ಸ್ನಾತಕೋತ್ತರದ ಪ್ರವೇಶದ ಬಗ್ಗೆ ಹೊರಡಿಸಿರುವ ಸರ್ಕಾರ ಆಧಿಸೂಚನೆ ಸಂಖ್ಯೆ : ಆಕುಕ 603 ಎಂಎಸ್ಎಫ್ 93 ದಿನಾಂಕ 7-9-1993ಕ್ಕೆ ತಡೆಆಜ್ಞೆಯನ್ನು ನೀಡಿದೆ. ತದನಂತರ ಸುಪ್ರೀಂ ಕೋರ್ಟ್ ದಿನಾಂಕ 14-1-1994ರ ಆದೇಶದಲ್ಲಿ ಈ ತಡೆಆಜ್ಞೆಯನ್ನು ತೆರವು ಮಾಡಿರುವುದರಿಂದ ಸ್ನಾತಕೋತ್ತರ ಪರೀಕ್ಷೆಗಾಗಿ ಮುಕ್ತ ಪಾಲಿನಲ್ಲಿ ಪರೀಕ್ಷೆಗೆ ಕುಳಿತಿರುವ ಅಭ್ಯರ್ಥಿಗಳ ಫಲಿತಾಂಶವನ್ನು ಈಗಾಗಲೇ ಪ್ರಕಟಿಸಿದೆ. ಹಾಗೂ ಸ್ನಾತಕೋತ್ತರ ತರಬೇತಿಗಾಗಿ ಸೇವಾ ನಿರತ ವೈದ್ಯರ ಆಯ್ಕೆ ಪಟ್ಟಿಯನ್ನು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರಿಂದ ಸ್ವೀಕೃತವಾಗಿದೆ.

ಸ್ನಾತಕೋತ್ತರ ವ್ಯಾಸಂಗದ ಮುಕ್ತ ಸ್ಪರ್ಧೆಯ ಆಯ್ಕೆ ಪಟ್ಟಿಯನ್ನು ಎಲ್ಲಾ ಪ್ರಮುಖ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಈಗಾಗಲೇ ಪ್ರಕಟಿಸಲಾಗಿದೆ. ಹಾಗೂ ಸೇವಾ ನಿರತ ವೈದ್ಯರನ್ನು ಸ್ನಾತಕೋತ್ತರ ವ್ಯಾಸಂಗಕ್ಕಾಗಿ ಪ್ರತಿನಿಯೋಜಿಸುವ ಬಗ್ಗೆ ಕೆಲವೇ ದಿನಗಳಲ್ಲಿ ಆಯ್ಕೆ ಪಟ್ಟಿ ಮಾಡಿ ಅಂತಿಮಗೊಳಿಸಲಾಗುವುದು.

3. ಕೆ.ಆರ್.ಪೇಟೆಯ ಪ್ರಥಮದರ್ಜೆ ಕಾಲೇಜಿಗೆ 93-94ನೇ ಸಾಲಿಗೆ ಸೇರಲು ಪ್ರವೇಶ ಅವಕಾಶ ಮಾಡಿಕೊಡುವುದು.

ಶ್ರೀ ಎಂ. ಪುಟ್ಟಸ್ವಾಮಿಗೌಡ (ಕೆ.ಆರ್.ಪೇಟೆ) : ಮಾನ್ಯ ಅಧ್ಯಕ್ಷರೇ ಕೃಷ್ಣರಾಜಪೇಟೆಯಲ್ಲಿರುವ ಪ್ರಥಮ ದರ್ಜೆ ಕಾಲೇಜಿಗೆ 1993-94ನೇ ಸಾಲಿಗೆ ಸೇರಲು ಸುಮಾರು ವಿದ್ಯಾರ್ಥಿಗಳಿಂದ 700 ಅರ್ಜಿಗಳು ಬಂದಿದ್ದು ಪ್ರವೇಶಾವಕಾಶಕ್ಕೆ ತುಂಬಾ ತೊಂದರೆಯಾಗಿತ್ತು. ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಬೇರೆಕಡೆ ಹೋಗಿ ವ್ಯಾಸಂಗ ಮಾಡಲು ಪಕ್ಕದ ಕಾಲೇಜುಗಳಲ್ಲೂ ಹೆಚ್ಚಿಗೆ ಒತ್ತಡವಿದ್ದು ದಾಖಲಾತಿ ಸಾಧ್ಯವಿಲ್ಲವಾದುದರಿಂದ ದಿನಾಂಕ 13.7.93ರಂದು ಒಂದು ಮನವಿಯನ್ನು ಸಲ್ಲಿಸಿದ್ದು ದಿನಾಂಕ 13.7.93ರಂದು ಮುಖ್ಯಮಂತ್ರಿಯವರು ಕರೆದಿದ್ದ ಮಂಡ್ಯ ಜಿಲ್ಲಾ ಅಭಿವೃದ್ಧಿ ಸಮಿತಿಯಲ್ಲಿ ಪ್ರಸ್ತಾಪನೆ ಮಾಡಿದ್ದೇನೆ. ನನ್ನ ಪ್ರಸ್ತಾವನೆಯ ನಂತರ ಸಭೆಯಲ್ಲಿ ಮುಖ್ಯಮಂತ್ರಿಗಳು ವಿಶೇಷಾಧಿಕಾರಿಗಳಿಗೆ ಸೂಚನೆ ನೀಡಿ ಸಂಬಂಧಪಟ್ಟ ಇಲಾಖೆಯವರಿಗೆ ತ್ವರಿತವಾಗಿ ಮಂಜೂರಾತಿ ನೀಡುವಂತೆ ಆದೇಶ ನೀಡಿದ್ದಾರೆ. ಇದಾದನಂತರ ಸಂಬಂಧಪಟ್ಟ ವಿದ್ಯಾ ಇಲಾಖೆಯವರ ಮಾಡಿದ ಭರವಸೆಯ ಮೇಲೆ ಕಾಲೇಜಿನ ಪ್ರಾಂಶುಪಾಲರು ಹಳ್ಳಿಗೆ ಬಂದು ತರಗತಿಯನ್ನು ತೆಗೆದು ವಿದ್ಯಾರ್ಥಿಗಳನ್ನು ದಾಖಲ್ಮಾಡಿಕೊಂಡಿರುತ್ತಾರೆ. ಆದರೆ ಈವರೆಗೆ ಇಲಾಖೆಯ ವತಿಯಿಂದ ಮಂಜೂರಾತಿ ಲಭಿಸದೆ ವಿದ್ಯಾರ್ಥಿಗಳು ತುಂಬಾ ತೊಂದರೆಗೊಳಗಾಗಿರುತ್ತಾರೆ. ನನಗೆ ತಿಳಿದಿರುವಂತೆ ಕೆಲವು ಕಾಲೇಜುಗಳಿಗೆ ಅನುಮತಿ ದೊರಕಿದೆ ಎಂದು ತಿಳಿದುಬಂದಿದೆ. ಈ ಕಾರಣ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಪರೀಕ್ಷೆಗಳು ಸಮೀಪಿಸುತ್ತಿರುವುದರಿಂದ ಕೂಡಲೇ ಮಂಜೂರಾತಿ ನೀಡಿ ವಿದ್ಯಾರ್ಥಿಗಳು ಪರೀಕ್ಷೆಗೆ ಕೂಡಲು ಅವಕಾಶ ಮಾಡಿಕೊಡಬೇಕೆಂದು ತಮ್ಮ ಮೂಲಕ ಈ ಹೇಳಿಕೆಯನ್ನು ನೀಡುತ್ತಿದ್ದೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಉನ್ನತ ಶಿಕ್ಷಣ ಸಚಿವರ ಪರವಾಗಿ ನೀಡಿದ ಹೇಳಿಕೆ)

ಮಾನ್ಯ ಅಧ್ಯಕ್ಷರೇ 1993-94ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಪ್ರಥಮದರ್ಜೆ ಕಾಲೇಜಿನಲ್ಲಿ ಪ್ರಥಮ ಬಿ.ಎ. ತರಗತಿ (ಇತಿಹಾಸ,

ಅರ್ಥಶಾಸ್ತ್ರ ಮತ್ತು ಸಮಾಜಶಾಸ್ತ್ರ ವಿಭಾಗಕ್ಕೆ ಅತಿ ಹೆಚ್ಚಿನ ಸಂಖ್ಯೆಯ ಅರ್ಜಿಗಳು ಪ್ರವೇಶಾವಕಾಶ ಕೋರಿ ಸ್ವೀಕೃತವಾದ್ದರಿಂದ ಕಾಲೇಜು ಶಿಕ್ಷಣ ನಿರ್ದೇಶನಾಲಯವು ಮೈಸೂರು ವಿಶ್ವವಿದ್ಯಾನಿಲಯದ ಅನುಮತಿಯನ್ನು ಕಾಯ್ದಿರಿಸಿ ಒಂದು ಹೆಚ್ಚುವರಿ ವಿಭಾಗವನ್ನು ತೆರೆದು ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ನೀಡಲಾಗಿದೆ. ಸಾರ್ವಜನಿಕ ಒತ್ತಾಯದ ಮೇಲೆ ಕಾಲೇಜಿನ ಪ್ರಾಂಶುಪಾಲರು ಪ್ರತ್ಯೇಕವಾಗಿ ಮೈಸೂರು ವಿಶ್ವವಿದ್ಯಾನಿಲಯವನ್ನು ಸದರಿ ಕಾಲೇಜಿನಲ್ಲಿ ಹೆಚ್ಚುವರಿ ವಿಭಾಗವನ್ನು ತೆರೆಯಲಾದ ಬಗ್ಗೆ ಮತ್ತು ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ನೀಡಲು ಅನುಮತಿ ಕೋರಿರುತ್ತಾರೆ. ವಿಶ್ವವಿದ್ಯಾನಿಲಯದ ಅನುಮತಿಯನ್ನು ಕಾಯಲಾಗಿದೆ. ಅನುಮೋದನೆ ದೊರೆತ ಕೂಡಲೇ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕೂಡಲು ಅವಕಾಶ ಕಲ್ಪಿಸಲಾಗುವುದು.

ಉಪಾಧ್ಯಕ್ಷರು : ಈಗ 1994-95ನೇ ಸಾಲಿನ ಆಯವ್ಯಯದ ಮೇಲಿನ ಮುಂದುವರಿದ ಸಾಮಾನ್ಯ ಚರ್ಚೆ

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಉಪಾಧ್ಯಕ್ಷರೇ ನಾನು ಸಂಬಂಧಪಟ್ಟ ಯಾವುದೇ ಕಾಗದಪತ್ರಗಳನ್ನು ಇವತ್ತು ತಂದಿಲ್ಲವಾದ ಕಾರಣ ಸೋಮವಾರಕ್ಕೆ ಮಾತನಾಡಲು ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಖಾಸಗಿ ಕಾರ್ಯಕಲಾಪಗಳು

ಖಾಸಗಿ ಸದಸ್ಯರ ವಿಧೇಯಕ :

1993ರ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಪ್ರೊ ಎಂ.ಡಿ. ನಂಜುಂಡಸ್ವಾಮಿ (ಧಾರವಾಡ-ಗ್ರಾಮಾಂತರ) : ಮಾನ್ಯ ಅಧ್ಯಕ್ಷರೇ 1993ನೇ ಸಾಲಿನ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "1993ರ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ 1993ನೇ ಸಾಲಿನ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ತಾವು ಹೇಗೂ ಈ ತಿದ್ದುಪಡಿಯನ್ನು ತರುತ್ತಿದ್ದೀರಿ. ಅದಕ್ಕಾಗಿ ಪ್ರೊ ನಂಜುಂಡಸ್ವಾಮಿಯವರು ಇದನ್ನು ಮಂಡಿಸತಕ್ಕಂಥ ಅವಶ್ಯಕತೆ ಇಲ್ಲವೆಂದು ನಾನು ಭಾವಿಸುತ್ತೇನೆ. ಏತಕ್ಕೆಂದರೆ ಸಮಗ್ರವಾದಂಥ ಒಂದು ತಿದ್ದುಪಡಿಯನ್ನು ಸರ್ಕಾರದವರೇ ತರುತ್ತಿರುವಾಗ ಇದನ್ನು ಒಂದು ಕ್ರಾಂತಿಕಾರಕವಾಗಿ ಬದಲಾವಣೆ ಮಾಡಿ ತರಬೇಕೆಂದು ಮಾನ್ಯ ಸದಸ್ಯರು ತರುವಂಥ ಅವಶ್ಯಕತೆ ಇಲ್ಲವೆಂದು ನನ್ನ ಭಾವನೆ. ನೋಟೀಸ್ ಕಳುಹಿಸಿ ಅದನ್ನು ಮಾಡಲ್ ಬೈಲಾಗಳಲ್ಲಿ ಮತ್ತು ಪ್ಲಾನಿಂಗ್ ಕಮೀಷನರ್‌ರವರ ಒಂದು ಹೇಳಿಕೆಯ ಆಧಾರದ ಮೇಲೆ ಕೆಲವು ತಿದ್ದುಪಡಿಗಳನ್ನು ಮಾಡಿ ಅವುಗಳನ್ನು ಕೂಡ ಸಭೆಯ ಮುಂದೆ ತಂದಿದ್ದಾರೆ.